KATK610015302024

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮಧುಗಿರಿ**

ಉಪಸ್ಥಿತರುಃ ಶ್ರೀ ಬಿ. ವೆಂಕಟಪ್ಪ., ಬಿ.ಎ.ಎಲ್.ಎಲ್.ಎಮ್.
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಮಧುಗಿರಿ.

**ತೀರ್ಪು ನೀಡಿದ ದಿನಾಂಕಃ 15ನೇ ಜುಲೈ 2026**

**ಸಿ.ಸಿ. ನಂ.92/2024**

**ಫಿರ್ಯಾದುದಾರರುಃ** ಸರ್ಕಾರ (ಮಧುಗಿರಿ ಪೋಲೀಸರಿಂದ)

ಸರಕಾರದ ಪರವಾಗಿ ಸರ್ಕಾರಿ ಅಭಿಯೋಜಕರು

**ವಿರುದ್ಧ**

**ಆರೋಪಿಃ** **ಜನಾರ್ಧನ್ ಜೆ**
ಬಿನ್ ಜಗನ್ನಾಥ,
ವಯಸ್ಸು 28 ವರ್ಷ,
ವಾಸಃ ಗೊಂದಿಹಳ್ಳಿ ಗ್ರಾಮ,
ಪುರವರ ಹೋಬಳಿ,
ಮಧುಗಿರಿ ತಾಲ್ಲೂಕು.

(ಆರೋಪಿ ಪರ ಶ್ರೀ ಎಂ.ಸಿ.ಕೆ., ವಕೀಲರು)

****

| | | |
|---|---|---|
| ಕೃತ್ಯ ನಡೆದ ದಿನಾಂಕ | : | 28.08.2024 |
| ವರದಿಯಾದ ದಿನಾಂಕ | : | 28.08.2024 |
| ಅಪರಾಧಿಕ ಕಲಂಗಳು | : | ಭಾ.ನ್ಯಾ.ಸಂ. ಕಲಂ 281, 106 ಮತ್ತು 125(ಎ ಮತ್ತು ಬಿ) |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | : | 10.07.2025 |
| ಸಾಕ್ಷಿ ವಿಚಾರಣೆ ಮುಗಿದ ದಿನಾಂಕ | : | 20.06.2026 |
| ನ್ಯಾಯಾಧೀಶರ ಅಭಿಪ್ರಾಯ | : | ಆರೋಪಿಯನ್ನು ನಿರ್ದೋಷಿ ಎಂದು ತೀರ್ಮಾನಿಸಲಾಗಿದೆ. |

* * *

**-: ತೀರ್ಪು :-**

ಪ್ರಸ್ತುತ ಪ್ರಕರಣವನ್ನು ಆರಕ್ಷಕ ಉಪನಿರೀಕ್ಷಕರು, ಮಧುಗಿರಿ ಪೋಲಿಸ ಠಾಣೆ ಮಧುಗಿರಿ ವಿಭಾಗ ರವರು ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 281, 106 ಹಾಗೂ 125(ಎ ಮತ್ತು ಬಿ)ರ ಅಡಿಯಲ್ಲಿ ಅಪರಾಧ ಮಾಡಿರುತ್ತಾನೆಂದು ದೋಷಾರೋಪಣಾ ಪಟ್ಟಿಯನ್ನು ದಾಖಲು ಮಾಡಿರುತ್ತಾರೆ.

2. **ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ.**

ದಿನಾಂಕ:28-08-2024 ರಂದು ಮಧ್ಯಾಹ್ನ 02-30 ಗಂಟೆ ಸಮಯದಲ್ಲಿ ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಮಧುಗಿರಿ-ಶಿರಾ ರಸ್ತೆಯ ಡಿ.ವಿ.ಹಳ್ಳಿ ಗ್ರಾಮದ

ಶ್ರೀ ಶನಿ ಮಹಾತ್ಮ ದೇವಸ್ಥಾನದ ಎದುರು ರಸ್ತೆಯ ಬಳಿ ಲಕ್ಷ್ಮಮ್ಮರವರು ನಡೆದುಕೊಂಡು ಹೋಗುತ್ತಿರುವಾಗ ಹಿಂದಿನಿಂದ ಬಂದ ಆರೋಪಿಯು ತನ್ನ ಬಾಬ್ತು KA-06-HT-6706ನೇ ಹಿರೋ ಸ್ಪೆಲಂಡರ್ ದ್ವಿಚಕ್ರ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಲಕ್ಷಮ್ಮರವರಿಗೆ ಡಿಕ್ಕಿ ಹೊಡೆಸಿದ ಪರಿಣಾಮ ಲಕ್ಷ್ಮಮ್ಮ ರವರಿಗೆ ಎಡ ಮತ್ತು ಬಲಕಾಲಿಗೆ ಎದೆಗೆ ತೀವ್ರಸ್ವರೂಪದ ಪೆಟ್ಟು ಬಿದ್ದು ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದು, ಅಲ್ಲದೇ ತನ್ನ ದ್ವಿಚಕ್ರ ವಾಹನವನ್ನು ಮಾನವ ಜೀವಕ್ಕೆ ಅಪಾಯ ಉಂಟುಪಡಿಸುವ ರೀತಿಯಲ್ಲಿ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಅಪಘಾತ ಮಾಡಿರುವುದರಿಂದ ತನ್ನ ದ್ವಿಚಕ್ರ ವಾಹನದ ಹಿಂದೆ ಕೂತಿದ್ದ ಚಾಸಾ-3 ಗಿರೀಶ್ ರವರಿಗೆ ಸಾಮಾನ್ಯ ಮತ್ತು ತೀವ್ರಸ್ವರೂಪದ ಗಾಯಗಳು ಆಗಿದ್ದು ಮತ್ತು ಆರೋಪಿಗೂ ಸಾಮಾನ್ಯ ಸ್ವರೂಪದ ಗಾಯಗಳು ಆಗಿರುತ್ತವೆಂದು ಚಾಸಾ-1ರವರು ಮಧುಗಿರಿ ಪೊಲೀಸ್ ಠಾಣೆಯ ಪೊಲೀಸರಿಗೆ ಪಿರ್ಯಾದಿ ನೀಡಿದ್ದು, ಸದರಿ ಪಿರ್ಯಾದಿಯನ್ನು ಸ್ವೀಕರಿಸಿದ್ದ ಮಧುಗಿರಿ ಪೋಲೀಸ್ ಠಾಣೆಯ ಪೋಲೀಸರು ತಮ್ಮ ಠಾಣಾ ಮೊಕದ್ದಮೆ ನಂ.115/2024 ರ ಅಡಿ ಪ್ರಕರಣವನ್ನು ದಾಖಲಿಸಿಕೊಂಡು, ನಂತರ ಪಂಚರ ಸಮಕ್ಷಮ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಘಟನಾ ಸ್ಥಳದ ಪಂಚನಾಮೆ ಮಾಡಿ, ಗಾಯಾಳುಗಳ ಗಾಯದ ಪ್ರಮಾಣ ಪತ್ರವನ್ನು ಪಡೆದು, ಶವ ಪಂಚನಾಮೆ ಮಾಡಿ,

ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡು ಪ್ರಕರಣದ ಸಮಗ್ರ ತನಿಖೆ ಮಾಡಿ ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 281, 106 ಹಾಗೂ 125(ಎ ಮತ್ತು ಬಿ)ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ .

3. ದೋಷಾರೋಪಣ ಪಟ್ಟಿ ಸಲ್ಲಿಸಿದ ನಂತರ ಅಪರಾಧಗಳ ಕುರಿತು ಸಂಜ್ಞೆ ತೆಗೆದುಕೊಂಡು ಆರೋಪಿಗೆ ಸಮನ್ಸ ಕಳಿಸಲಾಗಿ, ಆರೋಪಿ ಹಾಜರಾಗಿದ್ದು, ಆರೋಪಿಗೆ ನ್ಯಾಯ ಸುರಕ್ಷಾ ಸಂಹಿತೆಯ ಕಲಂ 230 ಅಡಿಯಲ್ಲಿ ಅಭಿಯೋಜನೆಯ ದಾಖಲೆಗಳ ನಕಲು ಪ್ರತಿಯನ್ನು ಒದಗಿಸಲಾಗಿದೆ. ಆರೋಪಿಗೆ ಅಪರಾಧದ ಬಗ್ಗೆ ಆರೋಪಣೆಗಳನ್ನು ರಚಿಸಿ ಓದಿ ಹೇಳಲಾಗಿ ಆರೋಪಿ ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕೆಂದು ಹೇಳಿದ್ದರಿಂದ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ.

4. ಅಭಿಯೋಜನೆಯು ತನ್ನ ಪರ ಒಟ್ಟು 13 ಸಾಕ್ಷಿದಾರರನ್ನು ಪ್ರಾಸಾ-1 ರಿಂದ 13 ಎಂದು ವಿಚಾರಣೆ ಮಾಡಲಾಗಿದ್ದು, ನಿಪಿ-1 ರಿಂದ 20 ರಂತಹ ದಾಖಲೆಗಳನ್ನು ಗುರುತಿಸಲಾಗಿರುತ್ತದೆ. ಅಭಿಯೋಜನೆಯ ಸಾಕ್ಷಿದಾರರ ಸಾಕ್ಷ್ಯ ಮುಕ್ತಾಯವಾದ ನಂತರ ಆರೋಪಿ ಹೇಳಿಕೆಯನ್ನು ಭಾ.ನ್ಯಾ.ಸು.ಸಂ.ಕಲಂಃ351 ರಡಿ ಹೇಳಿಕೆಗಳನ್ನು ದಾಖಲಿಸಿಕೊಂಡು ಆರೋಪಿಗೆ ತಮ್ಮ ಮಾದರಿಯ ಕನ್ನಡ ಭಾಷೆಯಲ್ಲಿ ಓದಿ ಹೇಳಲಾಗಿದ್ದು, ಆರೋಪಿ ತನ್ನ ವಿರುದ್ದ ಹೇಳಿರುವ ಎಲ್ಲಾ ಸಾಕ್ಷ್ಯಗಳು ಸುಳ್ಳು

ಎಂಬುದಾಗಿ ಅಲ್ಲಗಳೆದಿರುತ್ತಾರೆ. ಅಲ್ಲದೇ ತಮ್ಮ ಪರ ಯಾವುದೇ ಸಾಕ್ಷ್ಯ ವಿಚಾರಣೆ ಇಲ್ಲ ಎಂಬುದಾಗಿ ನುಡಿದಿರುತ್ತಾರೆ.

5. ಉಭಯ ಪಕ್ಷಗಾರರ ಪರ ವಾದ ವಿವಾದಗಳನ್ನು ಆಲಿಸಲಾಯಿತು. ಈ ಪ್ರಕರಣವನ್ನು ತೀರ್ಮಾನಿಸಲು ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆ.

**ಅಂಶಗಳು**

ಅಂಶ 1: ದಿನಾಂಕ:28-08-2024 ರಂದು ಮಧ್ಯಾಹ್ನ 02-30 ಗಂಟೆ ಸಮಯದಲ್ಲಿ ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಮಧುಗಿರಿ-ಶಿರಾ ರಸ್ತೆಯ ಡಿ.ವಿ.ಹಳ್ಳಿ ಗ್ರಾಮದ ಶ್ರೀ ಶನಿ ಮಹಾತ್ಮ ದೇವಸ್ಥಾನದ ಎದುರು ರಸ್ತೆಯ ಬಳಿ ಲಕ್ಷ್ಮಮ್ಮರವರು ನಡೆದುಕೊಂಡು ಹೋಗುತ್ತಿರುವಾಗ ಹಿಂದಿನಿಂದ ಬಂದ ಆರೋಪಿಯು ತನ್ನ ಬಾಬ್ತು KA-06-HT-6706 ನೇ ಹಿರೋ ಸ್ಪೆಲಂಡರ್ ದ್ವಿಚಕ್ರ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಲಕ್ಷಮ್ಮರವರಿಗೆ ಅಪಘಾತಪಡಿಸಿದ್ದು, ಆರೋಪಿ ಭಾರತೀಯ ನ್ಯಾಯ ಸಂಹಿತೆ ಕಲಂ.281 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸುವರೇ?

ಅಂಶ 2: ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ದ್ವಿಚಕ್ರ ವಾಹನವನ್ನು ಅತಿವೇಗವಾಗಿ ಚಾಲನೆ ಮಾಡಿಕೊಂಡು ಹೋಗಿ ಲಕ್ಷಮ್ಮರವರಿಗೆ ಡಿಕ್ಕಿ ಹೊಡೆಸಿದ ಪರಿಣಾಮ ಲಕ್ಷ್ಮಮ್ಮ ರವರಿಗೆ ಎಡ ಮತ್ತು ಬಲಕಾಲಿಗೆ ಎದೆಗೆ ತೀವ್ರಸ್ವರೂಪದ ಪೆಟ್ಟು ಬಿದ್ದು ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದು ಚಿಕಿತ್ಸೆ ಫಲಕಾರಿಯಾಗದೇ ಮರಣ ಹೊಂದಲು ಕಾರಣವಾಗಿದ್ದು, ಆರೋಪಿ ಭಾರತೀಯ ನ್ಯಾಯ ಸಂಹಿತೆಯ ಕಲಂ 106 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸುವರೇ ?

ಅಂಶ 3: ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ದ್ವಿಚಕ್ರ ವಾಹನವನ್ನು ಅತಿವೇಗವಾಗಿ ಮಾನವ ಜೀವಕ್ಕೆ ಅಪಾಯ ಉಂಟುಪಡಿಸುವ ರೀತಿಯಲ್ಲಿ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಅಪಘಾತ ಮಾಡಿರುವುದರಿಂದ ತನ್ನ ದ್ವಿಚಕ್ರ ವಾಹನದ ಹಿಂದೆ ಕೂತಿದ್ದ ಚಾಸಾ-3 ಗಿರೀಶ್ ರವರಿಗೆ ಸಾಮಾನ್ಯ ಮತ್ತು ತೀವ್ರ ಸ್ವರೂಪದ ಗಾಯಗಳು ಆಗಿದ್ದು ಮತ್ತು ಆರೋಪಿಗೂ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಆರೋಪಿ ಭಾರತೀಯ ನ್ಯಾಯ ಸಂಹಿತೆ ಕಲಂ.125(ಎ

ಮತ್ತು ಬಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸುವರೆ?

ಅಂಶ 4: ಯಾವ ಆಜ್ಞೆ ಅಥವಾ ಆದೇಶ ?

6. ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಮತ್ತು ಆರೋಪಿ ಪರ ವಕೀಲರ ವಾದವನ್ನು ಆಲಿಸಲಾಯಿತು ಹಾಗೂ ಕಡತದ ಮೇಲೆ ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಯಿತು.

7. ಈ ಮೇಲೆ ಹೇಳಿದ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸುತ್ತೇನೆ.

| | | |
|---|---|---|
| ಅಂಶ ನಂ.1 | : | ನಕಾರಾತ್ಮಕವಾಗಿ |
| ಅಂಶ ನಂ.2 | : | ನಕಾರಾತ್ಮಕವಾಗಿ |
| ಅಂಶ ನಂ.3 | : | ನಕಾರಾತ್ಮಕವಾಗಿ |
| ಅಂಶ ನಂ.4 | : | ಕೊನೆಯ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ |

**ಕಾರಣಗಳು**

8. **ಅಂಶ ನಂ.1 ರಿಂದ 3 :-** ಈ ಮೂರು ಅಂಶಗಳು ಆಂತರಿಕ ಸಂಬಂಧ ಹೊಂದಿರುವುದರಿಂದ ಹಾಗೂ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಎಲ್ಲ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

9. ದಿನಾಂಕ:28-08-2024 ರಂದು ಮಧ್ಯಾಹ್ನ 02-30 ಗಂಟೆ ಸಮಯದಲ್ಲಿ ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಮಧುಗಿರಿ-ಶಿರಾ ರಸ್ತೆಯ ಡಿ.ವಿ.ಹಳ್ಳಿ ಗ್ರಾಮದ ಶ್ರೀ ಶನಿ ಮಹಾತ್ಮ ದೇವಸ್ಥಾನದ ಎದುರು ರಸ್ತೆಯ ಬಳಿ ಲಕ್ಷ್ಮಮ್ಮರವರು ನಡೆದುಕೊಂಡು ಹೋಗುತ್ತಿರುವಾಗ ಹಿಂದಿನಿಂದ ಬಂದ ಆರೋಪಿಯು ತನ್ನ ಬಾಬ್ತು KA-06-HT-6706 ನೇ ಹಿರೋ ಸ್ಪೆಲಂಡರ್ ದ್ವಿಚಕ್ರ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಲಕ್ಷಮ್ಮರವರಿಗೆ ಡಿಕ್ಕಿ ಹೊಡೆಸಿದ ಪರಿಣಾಮ ಲಕ್ಷ್ಮಮ್ಮ ರವರಿಗೆ ಎಡ ಮತ್ತು ಬಲಕಾಲಿಗೆ ಎದೆಗೆ ತೀವ್ರಸ್ವರೂಪದ ಪೆಟ್ಟು ಬಿದ್ದು ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದು, ಅಲ್ಲದೇ ತನ್ನ ದ್ವಿಚಕ್ರ ವಾಹನವನ್ನು ಮಾನವ ಜೀವಕ್ಕೆ ಅಪಾಯ ಉಂಟುಪಡಿಸುವ ರೀತಿಯಲ್ಲಿ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಅಪಘಾತ ಮಾಡಿರುವುದರಿಂದ ತನ್ನ ದ್ವಿಚಕ್ರ ವಾಹನದ ಹಿಂದೆ ಕೂತಿದ್ದ ಚಾಸಾ-3 ಗಿರೀಶ್ ರವರಿಗೆ ಸಾಮಾನ್ಯ ಮತ್ತು ತೀವ್ರಸ್ವರೂಪದ ಗಾಯಗಳು ಆಗಿದ್ದು ಮತ್ತು ಆರೋಪಿಗೂ ಸಾಮಾನ್ಯ ಸ್ವರೂಪದ ಗಾಯಗಳು ಆಗಿರುತ್ತವೆ ಎಂಬುದಾಗಿರುತ್ತದೆ.

10. ಸಾಕ್ಷಿದಾರರ ಪುರಾವೆಯನ್ನು ಚರ್ಚಿಸುವುದಕ್ಕಿಂತ ಪೂರ್ವ ಅಭಿಯೋಜನೆಯವರು ಸದರಿ ಅಪರಾಧಗಳನ್ನು ರುಜುವಾತುಪಡಿಸಲು ಯಾವ

ಘಟಕಾಂಶಗಳು ಅವಶ್ಯಕತೆ ಇವೆ ಎಂಬುದು ಪ್ರಮುಖವಾಗಿರುತ್ತದೆ. ಭಾರತೀಯ ನ್ಯಾಯ ಸಂಹಿತೆಯ ಕಲಂ 281 ರಡಿಯಲ್ಲಿ ಅಪರಾಧವಾಗಬೇಕಾದರೆ ಈ ಕೆಳಕಂಡ ಘಟಕಾಂಶಗಳನ್ನು ಅಭಿಯೋಜನೆಯವರು ಯುಕ್ತ ಸಂಶಯ ಮೀರಿ ರುಜುವಾತುಪಡಿಸಬೇಕಾಗುತ್ತದೆ.

**1. ಆರೋಪಿತನು ವಾಹನವನ್ನು ನಡೆಸುತ್ತಿದ್ದನು ಅಥವಾ ಸವಾರಿ ಮಾಡುತ್ತಿದ್ದನು.**

**2. ಆರೋಪಿತನು ಸಾರ್ವಜನಿಕ ರಸ್ತೆಯಲ್ಲಿ ವಾಹನವನ್ನು ನಡೆಸುತ್ತಿದ್ದನು ಅಥವಾ ಸವಾರಿ ಮಾಡುತ್ತಿದ್ದನು.**

**3. ಆರೋಪಿತನು ಆ ವಾಹನವನ್ನು ಮನುಷ್ಯನ ಪ್ರಾಣಕ್ಕೆ ಅಪಾಯ ಉಂಟಾಗುವಂತೆ ಅಥವಾ ಇತರೆ ಯಾವುದೇ ವ್ಯಕ್ತಿಗೆ ಗಾಯವನ್ನು ಅಥವಾ ಕ್ಷತಿಯನ್ನು ಉಂಟು ಮಾಡುವಂತೆ ದುಡುಕಿನಿಂದ ಅಥವಾ ನಿರ್ಲಕ್ಷತನದಿಂದ ನಡೆಸುತ್ತಿದ್ದನು ಅಥವಾ ಸವಾರಿ ಮಾಡುತ್ತಿದ್ದನು.**

11. ಭಾರತೀಯ ನ್ಯಾಯ ಸಂಹಿತೆಯ ಕಲಂ 106ರಡಿಯಲ್ಲಿ ದಂಡನೀಯವಾದ ಅಪರಾಧವಾಗಬೇಕಾದರೆ ಈ ಕೆಳಕಂಡಂತೆ ಘಟಕಾಂಶಗಳನ್ನು ಅಭಿಯೋಜನೆಯವರು ಯುಕ್ತ ಸಂಶಯ ಮೀರಿ ರುಜುವಾತುಪಡಿಸಬೇಕು.

1) **ಆರೋಪಿ ತಾನು ಸಾದಾ ಮತ್ತು ತೀವ್ರ ಸ್ವರೂಪದ ಗಾಯಗಳನ್ನು ಉಂಟುಮಾಡಲು ಕಾರಣನಾಗಿದ್ದಾನೆ.**

2) **ಆರೋಪಿತನು ನಿರ್ಲಕ್ಷತೆಯಿಂದ ಅಥವಾ ನಿರ್ಲಕ್ಷತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ವಾಹನವನ್ನು ನಡೆಸಿದ್ದರಿಂದ ಘಟನೆ ಸಂಭವಿಸಿದೆ. ಇದರಿಂದ ಒಬ್ಬ ವ್ಯಕ್ತಿ ಮೃತಪಟ್ಟಿರುತ್ತಾರೆ.**

12. ಭಾರತೀಯ ನ್ಯಾಯ ಸಂಹಿತೆಯ ಕಲಂ 125(ಎ ಮತ್ತು ಬಿ)ರಡಿಯಲ್ಲಿ ದಂಡನೀಯವಾದ ಅಪರಾಧವಾಗಬೇಕಾದರೆ ಈ ಕೆಳಕಂಡಂತೆ ಘಟಕಾಂಶಗಳನ್ನು ಅಭಿಯೋಜನೆಯವರು ಯುಕ್ತ ಸಂಶಯ ಮೀರಿ ರುಜುವಾತುಪಡಿಸಬೇಕು.

1) **ಆರೋಪಿ ತಾನು ಅತಿವೇಗವಾಗಿ ವಾಹನ ಚಲಾಯಿಸಿದರೇ ತನ್ನ ಪ್ರಾಣಕ್ಕೆ ಹಾಗೂ ಬೇರೆಯವರ ಪ್ರಾಣಕ್ಕೆ ಅಪಾಯವಿದೆ ಎಂದು ತಿಳಿದು ಸಹ ಚಲಾಯಿಸಿ ಅಪಘಾತಪಡಿಸಿರುತ್ತಾರೆ.**

13. ಈ ಮೇಲ್ಕಂಡ ಅಂಶಗಳನ್ನು ಸಾಬೀತುಪಡಿಸಲು ಅಭಿಯೋಜನೆಯು ಪ್ರಾಸಾ-1 ರಿಂದ 13ರವರ ಸಾಕ್ಷ್ಯ ಹಾಗೂ ನಿಪಿ-1 ರಿಂದ 20 ರಂತಹ ದಾಖಲಾತಿಗಳ ಮೇಲೆ ಅವಲಂಬಿತವಾಗಿರುತ್ತದೆ. ಈ ಕೇಸಿನ ತನಿಖಾಧಿಕಾರಿಯವರು ಒಟ್ಟು 23 ಜನ ಸಾಕ್ಷಿದಾರರನ್ನು ಸಾಕ್ಷ್ಯ ಪಟ್ಟಿಯಲ್ಲಿ ಸೇರ್ಪಡೆ ಮಾಡಿದ್ದು, ಅವರುಗಳ ಪೈಕಿ ಚಾಸಾ-8

ರಿಂದ 14, ಚಾಸಾ-16, 18 ಮತ್ತು 19 ರವರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆ ಮೇರೆಗೆ ವಿಚಾರಣೆಯಿಂದ ಕೈಬಿಟ್ಟಿದ್ದು, ಶವ ಪಂಚನಾಮೆ, ಶವ ಪರೀಕ್ಷಾ ವರದಿ ಹಾಗೂ ಐ.ಎಂ.ವಿ. ವರದಿಯನ್ನು ಉಭಯ ಪಕ್ಷಗಾರರ ಸಮ್ಮತಿ ಮೇರೆಗೆ ನಿಶಾನೆಗೊಳಿಸಲಾಗಿರುತ್ತದೆ.

14. ಅಭಿಯೋಜನೆಯು ಆರೋಪಿ ವಿರುದ್ಧ ಮಾಡಲಾದ ಆರೋಪವನ್ನು ಸಾಬೀತುಪಡಿಸಲು ಪ್ರಾಸಾ-1 ಆನಂದ ಬಿನ್ ಗಂಗಣ್ಣ ಎಂಬುವವರನ್ನು ಈ ಅಪಘಾತಕ್ಕೆ ಸಂಬಂಧಿಸಿದಂತೆ ದೂರುದಾರರಾಗಿ ವಿಚಾರಣೆ ಮಾಡಿದ್ದು ಈ ಸಾಕ್ಷಿ ತನ್ನ ಮುಖ್ಯ ವಿಚಾರಣೆಯಲ್ಲಿ ಮೃತ ಲಕ್ಷ್ಮಮ್ಮ ತನ್ನ ತಾಯಿ. ದಿನಾಂಕ 28-08-2024 ರಂದು ತನ್ನ ತಾಯಿ ತನ್ನ ಮಗಳ ಮನೆಗೆ ಹೋಗಲು ಮಧುಗಿರಿಗೆ ಬರುತ್ತಿರುವಾಗ ಮಧ್ಯಾಹ್ನ 02.30 ಗಂಟೆ ಸಮಯದಲ್ಲಿ ಡಿ.ವಿ.ಹಳ್ಳಿ ಬಳಿಯಿರುವ ಶನಿಮಹಾತ್ಮ ದೇವಸ್ಥಾನದ ಹತ್ತಿರ ಇರುವ ರಸ್ತೆಯಲ್ಲಿ ಒಬ್ಬ ಮೋಟಾರ ಸೈಕಲ್ ಸವಾರ ತನ್ನ ಬಾಬ್ತು ಬೈಕ್ ನಂ.ಕೆಎ-06-ಹೆಚ್.ಟಿ.-6706 ಹಿರೋ ಹೊಂಡಾ ಸ್ಪೆಲಂಡರ್ ಪ್ಲಸ್ ಬೈಕನ್ನು ಅಜಾಗರೂಕತೆಯಿಂದ ಚಲಾಯಿಸಿ ಕೊಂಡು ಬಂದು ಹಿಂಬದಿಯಿಂದ ತನ್ನ ತಾಯಿಗೆ ಡಿಕ್ಕಿ ಪಡಿಸಿರುತ್ತಾರೆ ಎಂಬ ವಿಷಯವನ್ನು ಚಾಸಾ-2ರವರು ತನಗೆ ತಿಳಿಸಿದ್ದು, ನಂತರ ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಲಾಗಿ ತನ್ನ ತಾಯಿ ಎಡಗಾಲಿಗೆ ತೀವ್ರ ಸ್ವರೂಪದ ಗಾಯಗಳಾಗಿ ಮೃತ

ಪಟ್ಟಿದ್ದು, ಈ ಬಗ್ಗೆ ನಿಪಿ-1ರಂತಹ ದೂರು ನೀಡಿ ನಿಪಿ-2ರಂತಹ ಫೋಟೋದಲ್ಲಿರುವ ದ್ವಿಚಕ್ರ ವಾಹನವನ್ನು ಗುರುತಿಸಿರುತ್ತಾರೆ. ಆದರೆ ತನ್ನ ಪಾಟೀಸವಾಲಿನಲ್ಲಿ ಅಪಘಾತವಾದ ಸಂದರ್ಭದಲ್ಲಿ ತಾನು ಮನೆಯಲ್ಲಿದ್ದೆನು. ಆ ಬೈಕನ್ನು ಯಾರು ಚಲಾಯಿಸುತ್ತಿದ್ದರು ಎಂಬುದನ್ನು ತಾನು ನೋಡಿಲ್ಲ ಮತ್ತು ಆ ಬೈಕ್ ಯಾರ ಹೆಸರಿನಲ್ಲಿದೆ ಎಂಬುದು ತನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿದ್ದು, ತಾನು ಘಟನಾ ಸ್ಥಳಕ್ಕೆ ಹೋದಾಗ ಆರೋಪಿ ಆ ಸ್ಥಳದಲ್ಲಿ ಇರಲಿಲ್ಲ ಎಂಬುದಾಗಿ ಒಪ್ಪಿರುತ್ತಾರೆ. ಈ ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಲಾಗಿ ಈ ಸಾಕ್ಷಿಯು ಸ್ವತಃ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡದೇ ಇರುವುದರಿಂದ ಮತ್ತು ಆ ಸ್ಥಳದಲ್ಲಿ ಆರೋಪಿ ಇರಲಿಲ್ಲ ಎಂಬ ಅಂಶವನ್ನು ಒಪ್ಪಿರುವುದರಿಂದ ಈ ಸಾಕ್ಷಿಯ ಸಾಕ್ಷ್ಯದ ಆಧಾರದ ಮೇಲೆ ಆರೋಪಿಯ ತಪ್ಪಿನಿಂದಲೇ ಈ ಅಪಘಾತವಾಗಿದೆ ಎಂದು ನಿರ್ಧರಿಸಲು ಬರುವುದಿಲ್ಲ.

15. ಅಭಿಯೋಜನೆಯು ವಿಚಾರಣೆ ಮಾಡಲಾದ ಪ್ರಾಸಾ-2 ಗಿರೀಶ್ ಬಿನ್ ನರಸಪ್ಪ ಎಂಬುವವರನ್ನು ಈ ಅಪಘಾತಕ್ಕೆ ಸಂಬಂಧಿಸಿದಂತೆ ಪ್ರತ್ಯಕ್ಷ ಸಾಕ್ಷಿದಾರರಾಗಿ ವಿಚಾರಣೆ ಮಾಡಿದ್ದು ಈ ಸಾಕ್ಷಿ ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು, ಈ ಅಪಘಾತಕ್ಕೆ ಸಂಬಂಧಿಸಿದಂತೆ ತಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಆದರೆ ನಿಪಿ-3 ಈ ಸಾಕ್ಷಿಯ

ಹೇಳಿಕೆಯಾಗಿದ್ದು, ಈ ಸಾಕ್ಷಿ ಸಾಕ್ಷ್ಯ ನಿಪಿ-3 ರಲ್ಲಿ ಹೇಳಲಾದ ಅಂಶಗಳು ಮತ್ತು ಪ್ರಾಸಾ-1 ರವರ ಸಾಕ್ಷ್ಯ ಒಂದಕ್ಕೊಂದು ವ್ಯತ್ಯಾಸದಿಂದ ಕೂಡಿರುವುದರಿಂದ ಈ ಸಾಕ್ಷಿದಾರರ ಸಾಕ್ಷ್ಯದ ಆಧಾರದ ಮೇಲೆ ಆರೋಪಿ ತನ್ನ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ಮೃತ ಲಕ್ಷ್ಮಮ್ಮರವರಿಗೆ ಡಿಕ್ಕಿ ಪಡಿಸಿ ಮೃತ ಪಡಲು ಕಾರಣ ಕರ್ತರಾಗಿರುತ್ತಾರೆ ಎಂಬ ಅಂಶ ಸಾಬೀತಾಗಿರುವುದಿಲ್ಲ.

16. ಅಭಿಯೋಜನೆಯು ವಿಚಾರಣೆ ಮಾಡಲಾದ ಪ್ರಾಸಾ-3 ತಿಮ್ಮರಾಜು ಬಿನ್ ರಂಗಪ್ಪ ಎಂಬುವವರನ್ನು ಈ ಅಪಘಾತಕ್ಕೆ ಸಂಬಂಧಿಸಿದಂತೆ ಸ್ಥಳ ಪಂಚನಾಮೆ ಸಾಕ್ಷಿದಾರರಾಗಿ ವಿಚಾರಣೆ ಮಾಡಿದ್ದು, ಈ ಸಾಕ್ಷಿ ನಿಪಿ-4ರಂತಹ ಸ್ಥಳ ಪಂಚನಾಮೆ ಮತ್ತು ನಿಪಿ-5ರಂತಹ ಅಪಘಾತವಾದ ಸ್ಥಳದ ಕಚ್ಚಾನಕ್ಷೆಯಲ್ಲಿನ ತಮ್ಮ ಸಹಿಗಳನ್ನು ಗುರುತಿಸಿರುತ್ತಾರೆ. ಆದರೆ ಅವುಗಳಲ್ಲಿ ಬರೆದಿರುವ ವಿಚಾರ ತನಗೆ ಗೊತ್ತಿಲ್ಲ ಮತ್ತು ತನ್ನ ಜೊತೆ ಯಾರು ಸಹಿ ಮಾಡಿದರು ತನಗೆ ಗೊತ್ತಿಲ್ಲ ಎಂಬುದಾಗಿ ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಆ ಕಾರಣ ಈ ಕೇಸಿನ ತನಿಖಾಧಿಕಾರಿಯವರು ಈ ಸಾಕ್ಷಿ ಸಮಕ್ಷಮ ಘಟನಾ ಸ್ಥಳಕ್ಕೆ ಭೇಟಿ ನೀಡಿ ನಿಪಿ-4ರಂತಹ ಸ್ಥಳ ಪಂಚನಾಮೆ ಮಾಡಿ ನಿಪಿ-5 ರಂತಹ ಸ್ಥಳದ ಕಚ್ಚಾನಕ್ಷೆಯನ್ನು ತಯಾರಿಸಿರುವ ಬಗ್ಗೆ ಸಾಬೀತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ ಎಂದು ಹೇಳಬಹುದಾಗಿದೆ.

17. ಅಭಿಯೋಜನೆಯು ವಿಚಾರಣೆ ಮಾಡಲಾದ ಪ್ರಾಸಾ-4 ಸುಬ್ರಮಣ್ಯ ಬಿನ್ ಮಲೆರಂಗಪ್ಪ ಎಂಬುವವರನ್ನು ಈ ಅಪಘಾತಕ್ಕೆ ಸಂಬಂಧಿಸಿದಂತೆ ಸ್ಥಳ ಪಂಚನಾಮೆ ಸಾಕ್ಷಿದಾರರಾಗಿ ವಿಚಾರಣೆ ಮಾಡಿದ್ದು, ಈ ಸಾಕ್ಷಿ ದಿನಾಂಕ 29-08-2024ರಂದು ಈ ಅಪಘಾತಕ್ಕೆ ಸಂಬಂಧಿಸಿದಂತೆ ಪೋಲಿಸರು ಸ್ಥಳ ಪಂಚನಾಮೆಗೆ ತನ್ನ ಸಹಿ ಪಡೆದು ಆ ಸಂದರ್ಭದಲ್ಲಿ ನಿಪಿ-5ರಂತಹ ಕಚ್ಚಾನಕ್ಷೆಯನ್ನು ತಯಾರಿಸಿದರು ಎಂಬುದಾಗಿ ನುಡಿದಿರುತ್ತಾರೆ. ಆದರೆ ಆ ಪಂಚನಾಮೆಯನ್ನು ಯಾರು ಬರೆದರು ಎಂಬುದು ತನಗೆ ಗೊತ್ತಿಲ್ಲ. ಆ ಅಪಘಾತವಾದ ಸ್ಥಳದ ಚೆಕ್ಕುಬಂದಿ ಮತ್ತು ಅಪಘಾತ ಪಡಿಸಿದ ವಾಹನ ಸಂಖ್ಯೆಯನ್ನು ತಾನು ನೋಡಿಲ್ಲ ಮತ್ತು ನಿಪಿ-5ರಂತಹ ಕಚ್ಚಾನಕ್ಷೆಯನ್ನು ಎಲ್ಲಿ ಬರೆದರು ಎಂಬುದು ತನಗೆ ಗೊತ್ತಿಲ್ಲ ಎಂಬುದಾಗಿ ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಈ ಸಾಕ್ಷಿಯ ಸಾಕ್ಷ್ಯ ನಿಪಿ-4 ಮತ್ತು ನಿಪಿ-5ರಂತಹ ಕಚ್ಚಾನಕ್ಷೆಯಲ್ಲಿ ಹೇಳಲಾದ ಅಂಶಗಳು ಒಂದಕ್ಕೊಂದು ವ್ಯತ್ಯಾಸದಿಂದ ಕೂಡಿರುವುದರಿಂದ ಈ ಸಾಕ್ಷಿಯ ಸಾಕ್ಷ್ಯದ ಆಧಾರದ ಮೇಲೆ ಅಭಿಯೋಜನೆಯು ನಿಪಿ-4 ಮತ್ತು 5 ರಂತಹ ಸ್ಥಳ ಪಂಚನಾಮೆ ಮತ್ತು ಕಚ್ಚಾನಕ್ಷೆಯಲ್ಲಿರುವ ಅಂಶಗಳನ್ನು ಸಾಬೀತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ.

18. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-5 ಮಲ್ಲೇಶಪ್ಪ ಬಿನ್ ಮುನಿನಂಜಯ್ಯ ಮತ್ತು ಪ್ರಾಸಾ-6 ಮಹೇಶ್ ಬಿನ್ ನರಸಪ್ಪ ಎಂಬುವವರನ್ನು ಈ

ಅಪಘಾತಕ್ಕೆ ಸಂಬಂಧಿಸಿದಂತೆ ನಿಪಿ-6ರಂತಹ ವಾಹನ ಪರಿಶೀಲನಾ ಪಂಚನಾಮೆ ಸಾಕ್ಷಿದಾರರಾಗಿ ವಿಚಾರಣೆ ಮಾಡಿದ್ದು, ಈ ಇಬ್ಬರು ಸಾಕ್ಷಿದಾರರು ಸಹ ನಿಪಿ-6 ರಂತಹ ಅಮಾನತ್ತು ಪಂಚನಾಮೆಯಲ್ಲಿರುವ ತಮ್ಮಗಳ ಸಹಿಗಳನ್ನು ಮಾತ್ರ ಗುರುತಿಸಿರುತ್ತಾರೆ. ಆದರೆ ಅವುಗಳಲ್ಲಿ ಬರೆದಿರುವ ವಿಚಾರ ತಮಗೆ ಗೊತ್ತಿಲ್ಲ ಮತ್ತು ತಮ್ಮ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂಬುದಾಗಿ ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಆ ಕಾರಣ ಈ ಕೇಸಿನ ತನಿಖಾಧಿಕಾರಿಯವರು ಈ ಸಾಕ್ಷಿದಾರರ ಸಮಕ್ಷಮ ಅಪಘಾತ ಪಡಿಸಿದ ವಾಹನ ಸಂಖ್ಯೆ ಕೆಎ-06-ಹೆಚ್.ಟಿ.-6706ನ್ನು ಅಮಾನತ್ತು ಪಂಚನಾಮೆ ಮಾಡಿ ಆ ವಾಹನವನ್ನು ಅಮಾನತ್ತು ಪಡಿಸಿಕೊಂಡರು ಎಂಬ ಅಂಶಗಳನ್ನು ಸಾಬೀತು ಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ.

19. ಅಭಿಯೋಜನೆಯು ವಿಚಾರಣೆ ಮಾಡಲಾದ ಪ್ರಾಸಾ-7 ಹನುಮಪ್ಪ ಬಿನ್ ಹನುಮಂತರಾಯಪ್ಪ ಎಂಬುವವರನ್ನು ಈ ಅಪಘಾತಕ್ಕೆ ಸಂಬಂಧಿಸಿದಂತೆ ಪ್ರತ್ಯಕ್ಷ ಸಾಕ್ಷಿದಾರರಾಗಿ ವಿಚಾರಣೆ ಮಾಡಿದ್ದು, ಈ ಸಾಕ್ಷಿ ದಿನಾಂಕ 28-08-2024ರಂದು ಮೃತ ಲಕ್ಷ್ಮಮ್ಮರವರು ಮಧುಗಿರಿಯಿಂದ ಆಚೇನಹಳ್ಳಿಗೆ ಹೋಗುವ ರಸ್ತೆಯಲ್ಲಿ ಆಟೋದಲ್ಲಿ ಬರುತ್ತಿರುವಾಗ ಡಿ.ವಿ.ಹಳ್ಳಿ ಹತ್ತಿರವಿರುವ ಶನಿದೇವರ ದೇವಸ್ಥಾನದ ಹತ್ತಿರ ಆರೋಪಿ ತನ್ನ ಬಾಬ್ತು ಹಿರೋ ಹೊಂಡಾ ಸ್ಪೆಲಂಡರ್ ಪ್ಲಸ್ ನಂ.ಕೆಎ-06-ಹೆಚ್.ಟಿ.-6706 ನ್ನು

ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಲಕ್ಷ್ಮಮ್ಮರವರಿಗೆ ಡಿಕ್ಕಿ ಪಡಿಸಿದರು. ಇದರಿಂದ ಅವರ ತಲೆಗೆ, ದೇಹದ ಇತರೆ ಭಾಗಗಳಿಗೆ ಗಾಯಗಳಾಗಿ ಕೆಳಗಡೆ ಬಿದ್ದರು, ನಂತರ ಅವರನ್ನು ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಈ ವಿಚಾರವನ್ನು ಚಾಸಾ-1ರವರಿಗೆ ಫೋನ್ ಮೂಲಕ ತಿಳಿಸಿರುವುದಾಗಿ ನುಡಿದಿರುತ್ತಾರೆ. ದಿನಾಂಕ 29-08-2024ರಂದು ಪೋಲಿಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-4 ಮತ್ತು 5 ರವರ ಸಮಕ್ಷಮ ನಿಪಿ-4ರಂತಹ ಸ್ಥಳ ಪಂಚನಾಮೆ ಮಾಡಿ ನಿಪಿ-5ರಂತಹ ಕಚ್ಚಾನಕ್ಷೆಯನ್ನು ತಯಾರಿಸಲಾಯಿತು ಎಂಬುದಾಗಿ ನುಡಿದಿರುತ್ತಾರೆ. ಆದರೆ ಈ ಸಾಕ್ಷಿ ತನ್ನ ಮುಖ್ಯ ವಿಚಾರಣೆಯಲ್ಲಿ ಆ ದಿನ ಆರೋಪಿಯನ್ನು ತಾನು ನೋಡಿಲ್ಲ ಮತ್ತು ನ್ಯಾಯಾಲಯದ ಮುಂದಿರುವ ಆರೋಪಿ ಅಪಘಾತ ಪಡಿಸಿದರು ಎಂದರೆ ತನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಮುಂದುವರೆದು ಈ ಸಾಕ್ಷಿ ತನ್ನ ಪಾಟೀಸವಾಲಿನಲ್ಲಿ ಚಾಸಾ-1ರವರು ತಮ್ಮ ಊರಿನವರು ಮತ್ತು ಆ ಸ್ಥಳದಲ್ಲಿ ಹೆಚ್ಚು ವಾಹನಗಳು ಓಡಾಡುವುದರಿಂದ ಯಾವುದೇ ವಾಹನಗಳು ಅತಿವೇಗವಾಗಿ ಚಲಾಯಿಸಲು ಬರುವುದಿಲ್ಲ ಎಂದರೆ ಸರಿಯಲ್ಲ ಎಂಬುದಾಗಿ ಅಲ್ಲಗಳೆದಿದ್ದು ಮುಂದುವರೆದು ಈ ಸಾಕ್ಷಿ ಆ ದಿನ ತಾನು ಆರೋಪಿಯನ್ನು ಅಪಘಾತವಾದ ಸ್ಥಳದಲ್ಲಿ ನೋಡಿರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಈ ಅಂಶವನ್ನು ಪರಿಶೀಲಿಸಲಾಗಿ ಈ ಸಾಕ್ಷಿಯು ಆರೋಪಿಯನ್ನು ನೋಡದೇ ಇರುವುದರಿಂದ ಈ ಅಪಘಾತವು ಈ ಸಾಕ್ಷಿ ಸಾಕ್ಷ್ಯದ

ಆಧಾರದ ಮೇಲೆ ಆರೋಪಿಯ ತಪ್ಪಿನಿಂದಲೇ ಆಗಿದೆ ಎಂದು ನಿರ್ಧರಿಸಲು ಸಾಧ್ಯವಿರುವುದಿಲ್ಲ. ಈ ಸಾಕ್ಷಿಯ ಸಾಕ್ಷ್ಯ ಪ್ರಾಸಾ-1 ರಿಂದ 6 ರವರ ಸಾಕ್ಷ್ಯ ಒಂದಕ್ಕೊಂದು ಸಾಕಷ್ಟು ವ್ಯತ್ಯಾಸದಿಂದ ಕೂಡಿರುವುದರಿಂದ ಈ ಅಪಘಾತವು ಆರೋಪಿಯ ತಪ್ಪಿನಿಂದಲೇ ಆಗಿದೆ ಎಂದು ನಿರ್ಧರಿಸಲು ಸಾಧ್ಯವಿರುವುದಿಲ್ಲ.

20. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-8 ನಟರಾಜು ಬಿನ್ ನರಸಪ್ಪ ಎಂಬುವವರನ್ನು ಅಪಘಾತ ಪಡಿಸಿದ ದ್ವಿಚಕ್ರ ವಾಹನ ಸಂಖ್ಯೆ ಕೆಎ-06-ಹೆಚ್.ಟಿ.-6706ರ ವಾಹನದ ಮಾಲೀಕರಾಗಿ ವಿಚಾರಣೆ ಮಾಡಿದ್ದು, ಈ ಸಾಕ್ಷಿ ಮೋಟಾರ ವಾಹನ ಕಾಯ್ದೆ ಕಲಂ.133 ರಡಿ ನೀಡಲಾದ ನೋಟಿಸ್ ಪ್ರತಿ ಮತ್ತು ಅದಕ್ಕೆ ನೀಡಲಾದ ಉತ್ತರದ ಪ್ರತಿಗಳಲ್ಲಿನ ತಮ್ಮ ಸಹಿಗಳನ್ನು ಗುರ್ತಿಸಿರುತ್ತಾರೆ. ಆದರೆ ಅದರಲ್ಲಿ ಬರೆದ ವಿಚಾರ ತನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಅಲ್ಲದೇ ನಿಪಿ-14 ರಂತಹ ಇಂಡಿಮಿನಿಟಿ ಬಾಂಡ್ ಬರೆದುಕೊಟ್ಟು ಆ ವಾಹನವನ್ನು ತನ್ನ ವಶಕ್ಕೆ ಪಡೆದುಕೊಂಡಿರುವ ಬಗ್ಗೆ ನುಡಿದಿರುತ್ತಾರೆ. ಆದರೆ ಈ ಸಾಕ್ಷಿ ಈ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡದೇ ಇರುವುದರಿಂದ ಈ ಸಾಕ್ಷಿಯ ಸಾಕ್ಷ್ಯದ ಆಧಾರದ ಮೇಲೆ ಈ ಅಪಘಾತ ಆರೋಪಿಯ ತಪ್ಪಿನಿಂದಲೇ ಆಗಿದೆ ಎಂದು ನಿರ್ಧರಿಸಲು ಬರುವುದಿಲ್ಲ.

21. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-9 ಡಾಃ ಹೇಮಾವತಿ ಸ್ತ್ರಿರೋಗ ತಜ್ಞರು, ಸಾರ್ವಜನಿಕ ಆಸ್ಪತ್ರೆ, ಮಧುಗಿರಿ ಎಂಬುವವರನ್ನು

ವೈದ್ಯಾಧಿಕಾರಿಯಾಗಿ ವಿಚಾರಣೆ ಮಾಡಿದ್ದು ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-3 ಮತ್ತು ಆರೋಪಿ ದಿನಾಂಕ 28-08-2024 ರಂದು ರಸ್ತೆ ಅಪಘಾತದ ಹಿನ್ನಲೆಯಲ್ಲಿ ತನ್ನ ಬಳಿ ಚಿಕಿತ್ಸೆಗಾಗಿ ಬಂದಿದ್ದು ಸದರಿಯವರನ್ನು ಪರೀಕ್ಷಿಸಿ ನಿಪಿ-15 ಮತ್ತು 16 ರಂತಹ ಗಾಯದ ಪ್ರಮಾಣ ಪತ್ರಗಳನ್ನು ನೀಡಿರುವ ಬಗ್ಗೆ ನುಡಿದಿರುತ್ತಾರೆ. ಆದರೆ ಈ ಸಾಕ್ಷಿ ಈ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ ಮತ್ತು ಈ ಅಪಘಾತಕ್ಕೆ ಸಂಬಂದಪಟ್ಟ ಪ್ರತ್ಯಕ್ಷ ಸಾಕ್ಷಿದಾರರು, ದೂರುದಾರರು ಹಾಗೂ ಸ್ಥಳ ಪಂಚನಾಮೆಯ ಸಾಕ್ಷಿದಾರರರು ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣವಾದ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಈ ಸಾಕ್ಷಿಯ ಸಾಕ್ಷ್ಯದ ಆಧಾರದ ಮೇಲೆ ಆರೋಪಿ ಈ ಮೇಲೆ ಹೇಳಲಾದ ಆರೋಪಗಳನ್ನು ಮಾಡಿದ್ದಾನೆ ಎಂದು ನಿರ್ಧರಿಸಲು ಸಾಧ್ಯವಿಲ್ಲ.

22. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-10 ಶಿವಣ್ಣ ಕೆ. ಲೇಟ್ ಕೆಂಪಣ್ಣ, ಪೋಲಿಸ್ ಮುಖ್ಯ ಪೇದೆ, ಈ ಕೇಸಿನ ತನಿಖಾ ಸಹಾಯಕರಾಗಿ ವಿಚಾರಣೆ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಸಾಕ್ಷಿ ದಿನಾಂಕ 29.08.2024 ರಂದು ಚಾಸಾ-23 ರವರು ಹೇಳಿದಂತೆ ನಿಪಿ-10ರಂತಹ ಶವ ಪಂಚನಾಮೆ ವರದಿ ಮತ್ತು ನಿಪಿ-4 ರಂತಹ ಸ್ಥಳ ಪಂಚನಾಮೆಯನ್ನು ಲ್ಯಾಪಟಾಪ್‌ನಲ್ಲಿ ಬೆರಳಚ್ಚು ಮಾಡಿದ್ದು, ಅದಕ್ಕೆ ಸಂಬಂಧಪಟ್ಟಂತೆ ಭಾ.ಸಾ.ಅ.ಕಲಂ.63(4) ರ ಅಡಿಯಲ್ಲಿ ನಿಪಿ-17ರಂತಹ ದೃಡೀಕರಣ ಪತ್ರ ನೀಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಅಭಿಯೋಜನೆ ವಿಚಾರಣೆ

ಮಾಡಲಾದ ಪ್ರಾಸಾ-10ರವರು ಈ ಅಪಘಾತಕ್ಕೆ ಸಂಬಂದಪಟ್ಟ ತನಿಖಾ ಸಹಾಯಕರಾಗಿದ್ದು ಅವರು ತಾವು ತನಿಖಾ ಹಂತದಲ್ಲಿ ನಿರ್ವಹಿಸಿದ ಕರ್ತವ್ಯಗಳ ಬಗ್ಗೆ ನುಡಿದಿರುತ್ತಾರೆ. ಅಲ್ಲದೇ ಈ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡದೇ ಇರುವುದರಿಂದ ಈ ಅಪಘಾತ ಆರೋಪಿಯ ತಪ್ಪಿನಿಂದಲೇ ಆಗಿದೆ ಎಂದು ನಿರ್ಧರಿಸಲು ಬರುವುದಿಲ್ಲ.

23. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-11 ಜಿ.ಪಿ.ವಿನೋದ್ ಲೇಟ್ ಗಂಗಯ್ಯ ಪುಟ್ಟರಾಜು, ಎ.ಎಸ್.ಐ. ಈ ಕೇಸಿನ ತನಿಖಾ ಸಹಾಯಕರಾಗಿ ವಿಚಾರಣೆ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಸಾಕ್ಷಿ ದಿನಾಂಕ 11.09.2024 ರಂದು ಚಾಸಾ-23 ರವರು ಹೇಳಿದಂತೆ ನಿಪಿ-6 ರಂತಹ ಅಮಾನತ್ತು ಪಂಚನಾಮೆಯನ್ನು ಲ್ಯಾಪಟಾಪ್‌ನಲ್ಲಿ ಬೆರಳಚ್ಚು ಮಾಡಿದ್ದು, ಆ ಸಮಯದಲ್ಲಿ ನಿಪಿ-7 ಮತ್ತು 8ರಂತಹ ಫೋಟೋಗಳನ್ನು ತೆಗೆದಿದ್ದು, ನಿಪಿ-8 ರಂತಹ ಒಂದು ಸಿಡಿಯನ್ನು ಹಾಗೂ ಅದಕ್ಕೆ ಸಂಬಂಧಪಟ್ಟಂತೆ ಭಾ.ಸಾ.ಅ.ಕಲಂ.63(4) ರ ಅಡಿಯಲ್ಲಿ ನಿಪಿ-19 ರಂತಹ ದೃಡೀಕರಣ ಪತ್ರ ನೀಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-11ರವರು ಈ ಅಪಘಾತಕ್ಕೆ ಸಂಬಂದಪಟ್ಟ ತನಿಖಾ ಸಹಾಯಕರಾಗಿದ್ದು ಅವರು ತಾವು ತನಿಖಾ ಹಂತದಲ್ಲಿ ನಿರ್ವಹಿಸಿದ ಕರ್ತವ್ಯಗಳ ಬಗ್ಗೆ ನುಡಿದಿರುತ್ತಾರೆ. ಅಲ್ಲದೇ ಈ ಅಪಘಾತವನ್ನು

ಪ್ರತ್ಯಕ್ಷವಾಗಿ ನೋಡದೇ ಇರುವುದರಿಂದ ಈ ಅಪಘಾತ ಆರೋಪಿಯ ತಪ್ಪಿನಿಂದಲೇ ಆಗಿದೆ ಎಂದು ನಿರ್ಧರಿಸಲು ಬರುವುದಿಲ್ಲ.

24. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-12 ಹೆಚ್.ಜಿ. ಹನುಮಂತರಾಯಪ್ಪ, ಸಿ.ಪಿ.ಐ., ಈ ಕೇಸಿನ ತನಿಖಾಧಿಕಾರಿಯಾಗಿ ವಿಚಾರಣೆ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಸಾಕ್ಷಿ ದಿನಾಂಕ 29.08.2024 ರಂದು ಈ ಕೇಸಿನ ಕಡತವನ್ನು ಚಾಸಾ-22ರವರಿಂದ ಪಡೆದು ತನಿಖೆ ಮುಂದುವರೆಸಿ, ನಿಪಿ-10 ರಂತಹ ಶವ ಪಂಚನಾಮೆಯನ್ನು ತಯಾರಿಸಿ, ಚಾಸಾ-11 ರಿಂದ 14 ರವರ ಹೇಳಿಕೆ ಪಡೆದು, ನಿಪಿ-4 ರಂತಹ ಕೃತ್ಯ ಸ್ಥಳ ಪಂಚನಾಮೆಯನ್ನು ಹಾಗೂ ನಿಪಿ-5 ರಂತಹ ಕಚ್ಚಾ ನಕಾಶೆಯನ್ನು, ಸ್ಥಳ ಪಂಚನಾಮೆಯನ್ನು ಚಾಸಾ-20ರವರು ಬೆರಳಚ್ಚು ಮಾಡಿದ್ದು ಅದಕ್ಕೆ ಸಂಬಂಧಪಟ್ಟಂತೆ ಭಾ.ಸಾ.ಅ.ಕಲಂ.63(4) ರ ಅಡಿಯಲ್ಲಿ ನಿಪಿ-17 ರಂತಹ ದೃಡೀಕರಣ ಪತ್ರ ಪಡೆದು, ದ್ವಿಚಕ್ರ ವಾಹನಕ್ಕೆ ಸಂಬಂದಪಟ್ಟಂತೆ ನಿಪಿ-6 ರಂತಹ ಅಮಾನತ್ತು ಪಂಚನಾಮೆಯನ್ನು ಹಾಗೂ ಆ ಸಂದರ್ಭದಲ್ಲಿ ನಿಪಿ-7 ಮತ್ತು 8ರಂತಹ ಫೋಟೋಗಳನ್ನು ತೆಗೆದಿದ್ದು, ಅದಕ್ಕೆ ಸಂಬಂಧಪಟ್ಟಂತೆ ನಿಪಿ-18 ರಂತಹ ಒಂದು ಸಿಡಿಯನ್ನು ಹಾಗೂ ಭಾ.ಸಾ.ಅ.ಕಲಂ.63(4) ರ ಅಡಿಯಲ್ಲಿ ನಿಪಿ-19 ರಂತಹ ದೃಡೀಕರಣ ಪತ್ರ ಪಡೆದು, ಅಪಘಾತ ಪಡಿಸಿದ ವಾಹನದ ಮಾಲೀಕರಿಗೆ ನಿಪಿ-12 ರಂತೆ

ನೋಟಿಸ್ ಜಾರಿ ಮಾಡಿ ಅವರಿಂದ ನಿಪಿ-13ರಂತಹ ಪ್ರತ್ಯುತ್ತರ ಪಡೆದು, ಚಾಸಾ-16 ರವರಿಂದ ನಿಪಿ-11 ರಂತಹ ಐ.ಎಂ.ವಿ. ವರದಿಯನ್ನು ಪಡೆದು, ದ್ವಿಚಕ್ರ ವಾಹನವನ್ನು ನಿಪಿ-14ರಂತಹ ಇಂಡಿಮಿನಿಟಿ ಬಾಂಡ್ ಪಡೆದು ಅದರ ಮಾಲೀಕರ ವಶಕ್ಕೆ ಬಿಡುಗಡೆಗೊಳಿಸಿದ್ದು, ಸಂಬಂಧಪಟ್ಟ ವೈದ್ಯಾಧಿಕಾರಿಗಳಿಂದ ನಿಪಿ-9 ರಂತಹ ಮೃತನ ಶವ ಪರೀಕ್ಷಾ ವರದಿಯನ್ನು ಮತ್ತು ನಿಪಿ-15 ಮತ್ತು 16 ರಂತಹ ಆರೋಪಿ ಹಾಗೂ ಚಾಸಾ-3 ರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದು, ಚಾಸಾ-2 ಮತ್ತು 3ರವರ ಹೇಳಿಕೆ ಪಡೆದು ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿರುವ ಬಗ್ಗೆ ಸಾಕ್ಷ್ಯವನ್ನು ನುಡಿದಿರುತ್ತಾರೆ. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-12ರವರು ಈ ಅಪಘಾತಕ್ಕೆ ಸಂಬಂದಪಟ್ಟ ತನಿಖಾಧಿಕಾರಿಯಾಗಿದ್ದು ಅವರು ತಾವು ತನಿಖಾ ಹಂತದಲ್ಲಿ ನಿರ್ವಹಿಸಿದ ಕರ್ತವ್ಯಗಳ ಬಗ್ಗೆ ನುಡಿದಿರುತ್ತಾರೆ. ಆದರೆ ಇವರ ಸಾಕ್ಷ್ಯಕ್ಕೆ ಪೂರಕವಾಗಿ ದೂರುದಾರರು, ಸ್ಥಳ ಪಂಚನಾಮೆ ಸಾಕ್ಷಿದಾರರು, ಅಮಾನತ್ತು ಪಂಚನಾಮೆ ಸಾಕ್ಷಿದಾರರು ಮತ್ತು ಶವ ಪರೀಕ್ಷಾ ವರದಿಯ ಸಾಕ್ಷಿದಾರರು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿದ ಈ ಸಾಕ್ಷಿದಾರರ ಸಾಕ್ಷ್ಯದ ಆಧಾರದ ಮೇಲೆ ಆರೋಪಿಯೇ ಮೇಲೆ ಹೇಳಲಾದ ಆರೋಪಗಳ್ನು ಮಾಡಿದ್ದಾನೆ ಎಂದು ನಿರ್ಧರಿಸಲು ಸಾಧ್ಯವಿಲ್ಲ.

25. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-13 ಹನುಮಂತರಾಯಪ್ಪ, ಎ.ಎಸ್.ಐ., ಈ ಕೇಸಿನ ಭಾಗಶಃ ತನಿಖಾಧಿಕಾರಿಯಾಗಿ ವಿಚಾರಣೆ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಸಾಕ್ಷಿ ದಿನಾಂಕ 28.08.2024 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ನಿಪಿ-1ರಂತಹ ದೂರನ್ನು ಪಡೆದುಕೊಂಡು ಠಾಣಾ ಮೊಕದ್ದಮೆ ಸಂ.115/2024 ರಂತೆ ಪ್ರಕರಣವನ್ನು ದಾಖಲಿಸಿ, ನಿಪಿ-20 ರಂತಹ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಗಳಿಗೂ ನಿವೇದಿಸಿಕೊಂಡಿದ್ದು, ನಂತರ ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-23 ರವರಿಗೆ ವಹಿಸಿಕೊಟ್ಟಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-13 ರವರು ಈ ಅಪಘಾತಕ್ಕೆ ಸಂಬಂದಪಟ್ಟ ತನಿಖಾಧಿಕಾರಿಯಾಗಿದ್ದು ಅವರು ತಾವು ತನಿಖಾ ಹಂತದಲ್ಲಿ ನಿರ್ವಹಿಸಿದ ಕರ್ತವ್ಯಗಳ ಬಗ್ಗೆ ನುಡಿದಿರುತ್ತಾರೆ. ಆದರೆ ಇವರ ಸಾಕ್ಷ್ಯಕ್ಕೆ ಪೂರಕವಾಗಿ ಸ್ಥಳ ಪಂಚನಾಮೆ ಸಾಕ್ಷಿದಾರರು, ಅಮಾನತ್ತು ಪಂಚನಾಮೆ, ಪ್ರತ್ಯಕ್ಷ ಸಾಕ್ಷಿದಾರರು, ಶವ ಪಂಚನಾಮೆ ಸಾಕ್ಷಿದಾರರು ಮತ್ತು ಶವ ಪರೀಕ್ಷಾ ವರದಿಯ ಸಾಕ್ಷಿದಾರರು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಈ ಸಾಕ್ಷಿದಾರರ ಸಾಕ್ಷ್ಯದ ಆಧಾರದ ಮೇಲೆ ಆರೋಪಿಯು ಮೇಲೆ ಹೇಳಲಾದ ಆರೋಪಗಳ್ನು ಮಾಡಿದ್ದಾನೆ ಎಂದು ನಿರ್ಧರಿಸಲು ಸಾಧ್ಯವಿಲ್ಲ.

26. ಅಭಿಯೋಜನೆ ವಿಚಾರಣೆ ಮಾಡಲಾದ ಸಾಕ್ಷಿದಾರರ ಸಾಕ್ಷ್ಯ ಮತ್ತು ಹಾಜರು ಪಡಿಸಲಾದ ದಾಖಲೆಗಳನ್ನು ಪರಿಶೀಲಿಸಲಾಗಿ ದಿನಾಂಕ 28-08-2024 ರಂದು ಅಪಘಾತದ ಹಿನ್ನಲೆಯನ್ನು ಮೃತ ಲಕ್ಷ್ಮಮ್ಮರವರು ಮೃತ ಪಟ್ಟಿರುವ ಬಗ್ಗೆ ಯಾವುದೇ ವಿವಾದಗಳು ಇರುವುದಿಲ್ಲ. ಆದರೆ ಆರೋಪಿಯು ಅತಿವೇಗ ಮತ್ತು ಅಜಾಗರೂಕತೆಯ ಚಾಲನೆಯಿಂದ ಅಪಘಾತವಾಗಿ ಮೃತ ಲಕ್ಷ್ಮಮ್ಮರವರು ಚಿಕಿತ್ಸೆ ಫಲಕಾರಿಯಾಗಿದೇ ಮೃತ ಪಟ್ಟಿರುತ್ತಾರೆ ಎಂಬ ಅಂಶಗಳನ್ನು ಅಭಿಯೋಜನೆಯು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಬೇಕಾಗುತ್ತದೆ. ಈ ಬಗ್ಗೆ ಅಭಿಯೋಜನೆಯು ಪ್ರಾಸಾ-1 ರವರನ್ನು ದೂರುದಾರರಾಗಿ ವಿಚಾರಣೆ ಮಾಡಿದ್ದು, ಈ ಸಾಕ್ಷಿ ಆ ದಿನ ಅಪಘಾತದ ಹಿನ್ನಲೆಯಲ್ಲಿ ತನ್ನ ತಾಯಿ ಲಕ್ಷ್ಮಮ್ಮರವರು ಮೃತ ಪಟ್ಟಿರುವ ಬಗ್ಗೆ ನುಡಿದಿರುತ್ತಾರೆ. ಆದರೆ ಈ ಸಾಕ್ಷಿ ಆ ಅಪಘಾತವನ್ನು ತಾನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ ಮತ್ತು ಆ ಬೈಕನ್ನು ಯಾರು ಚಲಾಯಿಸುತ್ತಿದ್ದರು ಮತ್ತು ಆ ಬೈಕ್ ಯಾರಿಗೆ ಸಂಬಂಧಪಟ್ಟಿದ್ದು ಎಂಬುದು ತನಗೆ ಗೊತ್ತಿಲ್ಲ ಎಂಬುದಾಗಿ ಒಪ್ಪಿರುತ್ತಾರೆ. ಆ ಕಾರಣ ಈ ಸಾಕ್ಷಿಯು ಆ ಘಟನೆಯನ್ನು ಪ್ರತ್ಯಕ್ಷವಾಗಿ ನೋಡದೇ ಇರುವುದರಿಂದ ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯ ಚಾಲನೆಯಿಂದ ಈ ಅಪಘಾತವಾಗಿರುತ್ತದೆ ಎಂದು ನಿರ್ಧರಿಸಲು ಸಾಧ್ಯವಿರುವುದಿಲ್ಲ. ಆ ಕಾರಣ ಈ ಸಾಕ್ಷಿಯ ಸಾಕ್ಷ್ಯ ನಿಪಿ-1ರಂತಹ ದೂರಿನಲ್ಲಿ ಹೇಳಲಾದ ಅಂಶಗಳು ಒಂದಕ್ಕೊಂದು ವ್ಯತ್ಯಾಸದಿಂದ ಕೂಡಿರುತ್ತದೆ.

27. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-2 ರವರು ಈ ಅಪಘಾತಕ್ಕೆ ಸಂಬಂಧಿಸಿದಂತೆ ಪ್ರತ್ಯಕ್ಷ ಸಾಕ್ಷಿದಾರರಾಗಿ ವಿಚಾರಣೆ ಮಾಡಿದ್ದು, ಈ ಸಾಕ್ಷಿಯು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಈ ಸಾಕ್ಷಿ ತಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಆದರೆ ನಿಪಿ-3 ಈ ಸಾಕ್ಷಿಯ ಹೇಳಿಕೆಯಾಗಿದ್ದು, ಈ ಸಾಕ್ಷಿಯ ಸಾಕ್ಷ್ಯ ಪ್ರಾಸಾ-1ರವರ ಸಾಕ್ಷ್ಯ ಹಾಗೂ ನಿಪಿ-1 ಮತ್ತು 3 ರಂತಹ ದಾಖಲಾತಿಗಳಲ್ಲಿ ಹೇಳಲಾದ ಅಂಶಗಳು ಒಂದಕ್ಕೊಂದು ವ್ಯತ್ಯಾಸದಿಂದ ಕೂಡಿರುತ್ತವೆ. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-7 ರವರು ಈ ಅಪಘಾತಕ್ಕೆ ಸಂಬಂಧಿಸಿದಂತೆ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಈ ಸಾಕ್ಷಿಯು ಸಹ ದಿನಾಂಕ 28-08-2024ರಂದು ಮೃತ ಲಕ್ಷ್ಮಮ್ಮರವರು ಮಧುಗಿರಿಯಿಂದ ಆಚೇನಹಳ್ಳಿಗೆ ಹೋಗುವ ರಸ್ತೆಯಲ್ಲಿ ಆಟೋದಲ್ಲಿ ಬರುತ್ತಿರುವಾಗ ಹಿರೋಹೊಂಡಾ ಸ್ಪೆಲಂಡರ್ ಪ್ಲಸ್ ಬೈಕ್ ನಂ.ಕೆಎ-06-ಹೆಚ್.ಟಿ.-6706 ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಲಕ್ಷ್ಮಮ್ಮರವರಿಗೆ ಡಿಕ್ಕಿ ಪಡಿಸಿರುತ್ತಾರೆ ಎಂಬುದಾಗಿ ನುಡಿದಿರುತ್ತಾರೆ. ಆದರೆ ಆರೋಪಿ ಆ ಸ್ಥಳದಲ್ಲಿ ಇರಲಿಲ್ಲ ಮತ್ತು ಆರೋಪಿಯನ್ನು ತಾನು ನೋಡಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಆದರೆ ನಿಪಿ-1ರಂತಹ ದೂರನ್ನು ಪರಿಶೀಲಿಸಲಾಗಿ ಆ ದಿನ ಮೃತ ಲಕ್ಷ್ಮಮ್ಮರವರು ಆಟೋದಲ್ಲಿ ಬರುತ್ತಿರುವ ಬಗ್ಗೆ ಎಲ್ಲಿಯೂ ಸಹ ನಮೂದಾಗಿರುವುದಿಲ್ಲ.

ಆದರೆ ಈ ಸಾಕ್ಷಿ ಆ ದಿನ ಲಕ್ಷ್ಮಮ್ಮರವರು ಆಟೋದಲ್ಲಿ ಬರುತ್ತಿದ್ದರು ಎಂಬುದಾಗಿ ವ್ಯತಿರಿಕ್ತವಾದ ಸಾಕ್ಷ್ಯವನ್ನು ನುಡಿದಿರುತ್ತಾರೆ. ಆ ಕಾರಣ ಈ ಸಾಕ್ಷಿಯ ಸಾಕ್ಷ್ಯದ ಆಧಾರದ ಮೇಲೆ ಆರೋಪಿ ಈ ಮೇಲೆ ಹೇಳಲಾದ ಆರೋಪಗಳನ್ನು ಮಾಡಿದ್ದಾನೆ ಎಂದು ನಿರ್ಧರಿಸಲು ಸಾಧ್ಯವಿರುವುದಿಲ್ಲ.

28. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-3 ಮತ್ತು 4 ರವರು ಈ ಅಪಘಾತಕ್ಕೆ ಸಂಬಂಧಿಸಿದಂತೆ ಸ್ಥಳ ಪಂಚನಾಮೆ ಸಾಕ್ಷಿದಾರರಾಗಿ ವಿಚಾರಣೆ ಮಾಡಿದ್ದು, ಈ ಇಬ್ಬರೂ ಸಾಕ್ಷಿದಾರರು ಸಹ ಸ್ಥಳ ಪಂಚನಾಮೆಯಲ್ಲಿನ ತಮ್ಮ ಸಹಿಗಳನ್ನು ಮಾತ್ರ ಗುರುತಿಸಿರುತ್ತಾರೆ. ಆದರೆ ಅದರಲ್ಲಿ ಬರೆದಿರುವ ವಿಚಾರ ತಮಗೆ ಗೊತ್ತಿಲ್ಲ ಎಂಬುದಾಗಿ ಅಭಿಯೋಜನೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಆ ಕಾರಣ ಅಭಿಯೋಜನೆಯು ಈ ಸಾಕ್ಷಿದಾರರ ಸಾಕ್ಷ್ಯದ ಮೂಲಕ ನಿಪಿ-4ರಂತಹ ಸ್ಥಳ ಪಂಚನಾಮೆ ಮತ್ತು ನಿಪಿ-5ರಂತಹ ಕಚ್ಚಾನಕ್ಷೆಯಲ್ಲಿನ ಅಂಶಗಳನ್ನು ಸಾಬೀತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಅಭಿಯೋಜನೆಯ ವಿಚಾರಣೆ ಮಾಡಲಾದ ಪ್ರಾಸಾ-5 ಮತ್ತು 6 ರವರು ಅಪಘಾತ ಪಡಿಸಿದ ವಾಹನವನ್ನು ಅಮಾನತ್ತು ಪಡಿಸಿಕೊಂಡ ಬಗ್ಗೆ ಸಾಕ್ಷಿದಾರರಾಗಿ ವಿಚಾರಣೆ ಮಾಡಿದ್ದು, ಅವರುಗಳು ನಿಪಿ-6 ರಂತಹ ಅಮಾನತ್ತು ಪಂಚನಾಮೆಯಲ್ಲಿನ ತಮ್ಮ ಸಹಿಗಳನ್ನು ಮಾತ್ರ ಗುರುತಿಸಿರುತ್ತಾರೆ. ಆದರೆ ಅದರಲ್ಲಿ ಬರೆದಿರುವ ವಿಚಾರ ತಮಗೆ ಗೊತ್ತಿಲ್ಲ ಮತ್ತು ಪೋಲಿಸರು ತಮ್ಮ ಸಮಕ್ಷಮ

ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಆ ಕಾರಣ ಅಭಿಯೋಜನೆಯ ಆ ದಿನ ಆರೋಪಿ ಅಪಘಾತ ಪಡಿಸಿದರು ಎನ್ನಲಾದ ದ್ವಿಚಕ್ರ ವಾಹನ ಸಂಖ್ಯೆ ಕೆಎ-06-ಹೆಚ್.ಟಿ.-6706ನ್ನು ಈ ಸಾಕ್ಷಿದಾರರ ಸಮಕ್ಷಮ ಅಮಾನತ್ತು ಪಡಿಸಿಕೊಂಡರು ಎಂಬ ಅಂಶಗಳು ಸಾಬೀತಾಗಿರುವುದಿಲ್ಲ.

29. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-8ರವರು ಅಪಘಾತ ಪಡಿಸಿದ ಕೆಎ-06-ಹೆಚ್.ಟಿ.-6706ರ ವಾಹನದ ಮಾಲೀಕರಾಗಿದ್ದು, ಈ ಸಾಕ್ಷಿ ಪೋಲಿಸರು ನೀಡಿದ ನೋಟಿಸಿನ ಆಧಾರದ ಮೇಲೆ ಇಂಡಿಮಿನಿಟಿ ಬಾಂಡ್ ಬರೆದುಕೊಟ್ಟು ವಾಹನವನ್ನು ತನ್ನ ವಶಕ್ಕೆ ಪಡೆದು ಕೊಂಡಿರುವ ಬಗ್ಗೆ ಮಾತ್ರ ನುಡಿದಿರುತ್ತಾರೆ. ಆದರೆ ಈ ಸಾಕ್ಷಿ ಈ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡದೇ ಇರುವುದರಿಂದ ಈ ಸಾಕ್ಷಿದಾರರ ಸಾಕ್ಷ್ಯದ ಆಧಾರದ ಮೇಲೆ ಆರೋಪಿ ಈ ಮೇಲೆ ಹೇಳಲಾದ ಆರೋಪಗಳನ್ನು ಮಾಡಿದ್ದಾನೆ ಎಂದು ನಿರ್ಧರಿಸಲು ಸಾಧ್ಯವಿರುವುದಿಲ್ಲ. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-9ರವರು ಆರೋಪಿ ಮತ್ತು ಚಾಸಾ-3 ರವರಿಗೆ ಅಪಘಾತದ ಹಿನ್ನಲೆಯಲ್ಲಿ ಚಿಕಿತ್ಸೆ ನೀಡಿ ನಿಪಿ-15 ಮತ್ತು 16ರಂತಹ ಗಾಯದ ಪ್ರಮಾಣ ಪತ್ರಗಳನ್ನು ನೀಡಿರುವ ಬಗ್ಗೆ ತಮ್ಮ ಸಾಕ್ಷ್ಯ ವಿಚಾರಣೆಯಲ್ಲಿ ನುಡಿದಿರುತ್ತಾರೆ. ಆದರೆ ಈ ಸಾಕ್ಷಿ ಈ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡದೇ ಇರುವುದರಿಂದ ಈ

ಸಾಕ್ಷಿಯ ಸಾಕ್ಷ್ಯದ ಆಧಾರದ ಮೇಲೆ ಆರೋಪಿ ಈ ಮೇಲೆ ಹೇಳಲಾದ ಆರೋಪಗಳನ್ನು ಮಾಡಿದ್ದಾನೆ ಎಂದು ನಿರ್ಧರಿಸಲು ಸಾಧ್ಯವಿರುವುದಿಲ್ಲ. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-10 ರಿಂದ 13ರವರು ಈ ಕೇಸಿನ ತನಿಖಾಧಿಕಾರಿಗಳು ಮತ್ತು ತನಿಖಾ ಸಹಾಯಕರಾಗಿದ್ದು ಅವರು ತಾವು ತನಿಖಾ ಹಂತದಲ್ಲಿ ನಿರ್ವಹಿಸಿದ ಕೆಲಸ ಕಾರ್ಯಗಳ ಬಗ್ಗೆ ನುಡಿದಿರುತ್ತಾರೆ. ಆದರೆ ಈ ಸಾಕ್ಷಿದಾರರು ಈ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ ಮತ್ತು ಇವರ ಸಾಕ್ಷ್ಯಕ್ಕೆ ಪೂರಕವಾಗಿ ಅಪಘಾತಕ್ಕೆ ಸಂಬಂಧಿಸಿದಂತೆ ದೂರುದಾರರು, ಸ್ಥಳ ಮತ್ತು ಅಮಾನತ್ತು ಪಂಚನಾಮೆ ಸಾಕ್ಷಿದಾರರು, ವಾಹನ ಪರಿಶೀಲನಾ ಸಾಕ್ಷಿದಾರರು ಮತ್ತು ಪ್ರತ್ಯಕ್ಷ ಸಾಕ್ಷಿದಾರರು ಅಭಿಯೋಜನೆ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿಯದೇ ಇರುವುದರಿಂದ ಈ ಸಾಕ್ಷಿದಾರರ ಸಾಕ್ಷ್ಯದ ಆಧಾರದ ಮೇಲೆ ಈ ಅಪಘಾತವು ಆರೋಪಿಯ ತಪ್ಪಿನಿಂದಲೇ ಆಗಿರುತ್ತದೆ ಎಂದು ನಿರ್ಧರಿಸಲು ಬರುವುದಿಲ್ಲ. ಅಭಿಯೋಜನೆಯು ಈ ಅಪಘಾತಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಲಾದ ನಿಪಿ-5 ಅಪಘಾತವಾದ ಸ್ಥಳದ ಕಚ್ಚಾನಕ್ಷೆ ಆಗಿದ್ದು, ಆ ಕಚ್ಚಾನಕ್ಷೆಯನ್ನು ಪರಿಶೀಲಿಸಲಾಗಿ ಪ್ರಾಸಾ-1 ರಿಂದ 7 ರವರ ಸಾಕ್ಷ್ಯ ಮತ್ತು ಕಚ್ಚಾನಕ್ಷೆಯಲ್ಲಿ ನಮೂದಿಸಲಾದ ಅಂಶಗಳು ಒಂದಕ್ಕೊಂದು ವ್ಯತ್ಯಾಸದಿಂದ ಕೂಡಿರುವುದರಿಂದ ಆ ದಿನ ಈ ಅಪಘಾತವು ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆಯಿಂದ ಉಂಟಾಗಿರುತ್ತದೆ ಎಂಬ ಬಗ್ಗೆ ಪೂರಕವಾದ

ದಾಖಲಾತಿಗಳಿರುವುದಿಲ್ಲ. ಈ ಕೇಸಿನ ತನಿಖಾಧಿಕಾರಿಗಳು ಚಾಸಾ-8 ರಿಂದ 14, ಚಾಸಾ-16, 18 ಮತ್ತು 19 ರವರನ್ನು ಶವ ಪರೀಕ್ಷಾ, ಶವ ಪಂಚನಾಮೆ ವರದಿ ಮತ್ತು ಐ.ಎಂ.ವಿ. ವರದಿಯ ಸಾಕ್ಷಿದಾರರಾಗಿ ದೋಷಾರೋಪಣೆ ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗಿದ್ದು, ಅವರು ಶವ ಪರೀಕ್ಷಾ ವರದಿ, ಶವ ಪಂಚನಾಮೆ ವರದಿ ಮತ್ತು ಐ.ಎಂ.ವಿ. ವರದಿಯನ್ನು ಉಭಯ ಪಕ್ಷಗಾರರ ಅನುಮತಿಯ ಮೇರೆಗೆ ನಿಪಿ-9 ರಿಂದ 11 ಎಂದು ಗುರುತಿಸಿರುವುದರಿಂದ ಅವರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆ ಮೇರೆಗೆ ವಿಚಾರಣೆಯಿಂದ ಕೈಬಿಡಲಾಗಿರುತ್ತದೆ.

30. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ಆ ದಿನ ಅಪಘಾತವಾದ ಹಿನ್ನಲೆಯಲ್ಲಿ ಮೃತ ಲಕ್ಷ್ಮಮ್ಮರವರು ಆರೋಪಿಯ ಬಾಬ್ತು ದ್ವಿಚಕ್ರ ವಾಹನ ಸಂಖ್ಯೆ ಕೆಎ-06-ಹೆಚ್.ಟಿ-6706 ಹಿರೋ ಹೊಂಡಾ ಸ್ಪೆಲಂಡರ್ ದ್ವಿಚಕ್ರ ವಾಹನವನ್ನು ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ಬಂದು ಪ್ರಾಸಾ-1ರವರ ತಾಯಿ ಲಕ್ಷ್ಮಮ್ಮರವರಿಗೆ ಡಿಕ್ಕಿ ಪಡಿಸಿದ ಪರಿಣಮ ಅಪಘಾತವಾಗಿ ಮೃತ ಪಟ್ಟಿರುತ್ತಾರೆ ಎಂಬ ಅಂಶಗಳನ್ನು ಸಾಬೀತು ಪಡಿಸುವಲ್ಲಿ ಅಭಿಯೋಜನೆಯು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಅಭಿಯೋಜನೆಯು ವಿಚಾರಣೆ ಮಾಡಲಾದ ಚಾಸಾ-1 ರಿಂದ 8 ರವರು ಅಂದರೆ ದೂರುದಾರರು, ಸ್ಥಳ ಪಂಚನಾಮೆ ಸಾಕ್ಷಿದಾರರು, ವಾಹನ ಪರಿಶೀಲನಾ ಪಂಚನಾಮೆ ಸಾಕ್ಷಿದಾರರು ಮತ್ತು ಪ್ರತ್ಯಕ್ಷ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣಕ್ಕೆ

ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಅಪಘಾತವು ಆರೋಪಿಯ ತಪ್ಪಿನಿಂದಲೇ ಆಗಿದೆ ಎಂಬ ಅಂಶಗಳನ್ನು ಅಭಿಯೋಜನೆಯು ನಿಸ್ಸಂಶಯಾತೀತವಾಗಿ ಸಾಬೀತುಪಡಿಸಲು ವಿಫಲರಾಗಿರುತ್ತಾರೆ. ಈ ಎಲ್ಲಾ ಕಾರಣಗಳಿಂದಾಗಿ ಈ ಕೇಸಿನ ತನಿಖಾಧಿಕಾರಿಯವರು ಆರೋಪಿ ವಿರುದ್ದ ಮಾಡಲಾದ ಭಾರತೀಯ ನ್ಯಾಯ ಸಂಹಿತೆಯ ಕಲಂ 281, 106 ಹಾಗೂ 125(ಎ ಮತ್ತು ಬಿ) ರಡಿಯಲ್ಲಿ ಹೇಳಲಾದ ಎಲ್ಲಾ ಘಟಕಾಂಶಗಳನ್ನು ನಿಸ್ಸಂಶಯಾತೀತವಾಗಿ ಸಾಬೀತುಪಡಿಸುವಲ್ಲಿ ವಿಫಲರಾಗಿರುತ್ತಾರೆ ಎಂದು ಪರಿಗಣಿಸಿ ಆ ಸಂಶಯದ ಲಾಭವನ್ನು ಆರೋಪಿಗೆ ನೀಡಿ ದೋಷಮುಕ್ತಗೊಳಿಸಿ ಬಿಡುಗಡೆ ಮಾಡಿದ್ದೇ ಆದಲ್ಲಿ ನ್ಯಾಯದ ವಿಫಲತೆ ಉಂಟಾಗುವುದಿಲ್ಲ ಎಂದು ಪರಿಗಣಿಸಿ **ಅಂಶ ನಂ:1 ರಿಂದ 3 ನ್ನು ನಕಾರಾತ್ಮಕವಾಗಿ** ಉತ್ತರಿಸಿದ್ದೇನೆ.

31. **ಅಂಶ ನಂ.4 :-** ಅಂಶ ನಂ:1 ರಿಂದ 3 ಕ್ಕೆ ಉತ್ತರಿಸಿದ ಕಾರಣಗಳಿಂದ ಈ ಕೆಳಕಂಡಂತೆ:

## ಆದೇಶ

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಕಲಂ.271(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿತನನ್ನು ಭಾರತೀಯ ನ್ಯಾಯ ಸಂಹಿತೆ ಕಲಂ 281, 106 ಹಾಗೂ 125(ಎ ಮತ್ತು ಬಿ) ರ

ಕಾಯ್ದೆಗಳಡಿ ಅಪರಾಧಗಳಿಂದ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಲಾಗಿದೆ.

ಆರೋಪಿ ಮತ್ತು ಆತನ ಜಾಮೀನುದಾರನ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ಮೇಲೆ ತಿದ್ದುಪಡಿಗಳನ್ನು ಪರಿಶೀಲಿಸಿ ದಿಃ **15**ನೇ ಜುಲೈ **2026** ರಂದು ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ಉಚ್ಚರಿಸಲಾಯಿತು)

Sd/-

( ಬಿ. ವೆಂಕಟಪ್ಪ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಮಧುಗಿರಿ.

## ಅನುಬಂಧ

**ಅಭಿಯೋಜನೆ ಪರವಾಗಿ ಸಾಕ್ಷಿ ನುಡಿದವರುಃ**

| | |
|---|---|
| ಪ್ರಾಸಾ-1 | : ಆನಂದ ಬಿನ್ ಗಂಗಣ್ಣ |
| ಪ್ರಾಸಾ-2 | : ಗಿರೀಶ್ ಬಿನ್ ನರಸಪ್ಪ |
| ಪ್ರಾಸಾ-3 | : ತಿಮ್ಮರಾಜು ಬಿನ್ ರಂಗಪ್ಪ |
| ಪ್ರಾಸಾ-4 | : ಸುಬ್ರಮಣ್ಯ ಬಿನ್ ಮಲೆರಂಗಪ್ಪ |
| ಪ್ರಾಸಾ-5 | : ಮಲ್ಲೇಶಪ್ಪ ಬಿನ್ ಮುನಿನಂಜಯ್ಯ |
| ಪ್ರಾಸಾ-6 | : ಮಹೇಶ್ ಬಿನ್ ನರಸಪ್ಪ |
| ಪ್ರಾಸಾ-7 | : ಹನುಮಪ್ಪ ಬಿನ್ ಹನುಮಂತರಾಯಪ್ಪ |
| ಪ್ರಾಸಾ-8 | : ನಟರಾಜು ಬಿನ್ ನರಸಪ್ಪ |
| ಪ್ರಾಸಾ-9 | : ಡಾಃ ಹೇಮಾವತಿ |
| ಪ್ರಾಸಾ-10 | : ಶಿವಣ್ಣ ಕೆ. ಬಿನ್ ಲೇಟ್ ಕೆಂಪಣ್ಣ |

| | | |
|---|---|---|
| ಪ್ರಾಸಾ-11 | : ಜಿ.ಪಿ.ವಿನೋದ್ ಬಿನ್ ಲೇಟ್ ಗಂಗಯ್ಯ ಪುಟ್ಟರಾಜು |
| ಪ್ರಾಸಾ-12 | : ಹೆಚ್.ಜಿ.ಹನುಮಂತರಾಯಪ್ಪ ಬಿನ್ ಗಂಗಣ್ಣ |
| ಪ್ರಾಸಾ-13 | : ಹನುಮಂತರಾಯಪ್ಪ ಬಿನ್ ಲೇಟ್ ರಾಮಪ್ಪ |

**ಅಭಿಯೋಜನೆ ಪರವಾಗಿ ಹಾಜರುಪಡಿಸಲಾದ ದಾಖಲೆಗಳುಃ**

| | |
|---|---|
| ನಿಪಿ-1 | : ದೂರು |
| ನಿಪಿ-1ಎ | : ಪ್ರಾಸಾ 1 ರವರ ಸಹಿ |
| ನಿಪಿ-1ಬಿ | : ಪ್ರಾಸಾ 13 ರವರ ಸಹಿ |
| ನಿಪಿ-2 | : ಒಂದು ಪೋಟೊ |
| ನಿಪಿ-3 | : ಪ್ರಾಸಾ 2 ರವರ ಹೇಳಿಕೆ |
| ನಿಪಿ-4 | : ಸ್ಥಳ ಪಂಚನಾಮೆ |
| ನಿಪಿ-4ಎ | : ಪ್ರಾಸಾ 3 ರವರ ಸಹಿ |
| ನಿಪಿ-4ಬಿ | : ಪ್ರಾಸಾ 4 ರವರ ಸಹಿ |
| ನಿಪಿ-4ಸಿ | : ಪ್ರಾಸಾ 7 ರವರ ಸಹಿ |
| ನಿಪಿ-4ಡಿ | : ಪ್ರಾಸಾ 10 ರವರ ಸಹಿ |
| ನಿಪಿ-4ಈ | : ಪ್ರಾಸಾ 12 ರವರ ಸಹಿ |
| ನಿಪಿ-5 | : ಕಚ್ಚಾನಕ್ಷೆ |
| ನಿಪಿ-5ಎ | : ಪ್ರಾಸಾ 3 ರವರ ಸಹಿ |
| ನಿಪಿ-5ಬಿ | : ಪ್ರಾಸಾ 4 ರವರ ಸಹಿ |
| ನಿಪಿ-5ಸಿ | : ಪ್ರಾಸಾ 7 ರವರ ಸಹಿ |
| ನಿಪಿ-5ಡಿ | : ಪ್ರಾಸಾ 12 ರವರ ಸಹಿ |
| ನಿಪಿ-6 | : ಅಮಾನತ್ತು ಪಂಚನಾಮೆ |
| ನಿಪಿ-6ಎ | : ಪ್ರಾಸಾ 5 ರವರ ಸಹಿ |
| ನಿಪಿ-6ಬಿ | : ಪ್ರಾಸಾ 6 ರವರ ಸಹಿ |

| | |
|---|---|
| ನಿಪಿ-6ಸಿ | : ಪ್ರಾಸಾ 11 ರವರ ಸಹಿ |
| ನಿಪಿ-6ಡಿ | : ಪ್ರಾಸಾ 12 ರವರ ಸಹಿ |
| ನಿಪಿ-7 ಮತ್ತು 8 | : ಎರಡು ಪೋಟೊಗಳು |
| ನಿಪಿ-9 | : ಶವ ಪರೀಕ್ಷಾ ವರದಿ |
| ನಿಪಿ-9ಎ | : ಪ್ರಾಸಾ 12 ರವರ ಸಹಿ |
| ನಿಪಿ-10 | : ಶವ ಪಂಚನಾಮೆ |
| ನಿಪಿ-10ಎ | : ಪ್ರಾಸಾ 12 ರವರ ಸಹಿ |
| ನಿಪಿ-11 | : ಐ.ಎಂ.ವಿ. ವರದಿ |
| ನಿಪಿ-11ಎ | : ಪ್ರಾಸಾ 12 ರವರ ಸಹಿ |
| ನಿಪಿ-12 | : ವಾಹನದ ಮಾಲೀಕರಿಗೆ ನೀಡಿದ ನೋಟಿಸ್ |
| ನಿಪಿ-12ಎ | : ಪ್ರಾಸಾ 8 ರವರ ಸಹಿ |
| ನಿಪಿ-12ಬಿ | : ಪ್ರಾಸಾ 12 ರವರ ಸಹಿ |
| ನಿಪಿ-13 | : ನೋಟಿಸ್‌ಗೆ ನೀಡಿದ ಉತ್ತರ |
| ನಿಪಿ-13ಎ | : ಪ್ರಾಸಾ 8 ರವರ ಸಹಿ |
| ನಿಪಿ-13ಬಿ | : ಪ್ರಾಸಾ 12 ರವರ ಸಹಿ |
| ನಿಪಿ-14 | : ಇಂಡಿಮಿನಿಟಿ ಬಾಂಡ್ |
| ನಿಪಿ-14ಎ | : ಪ್ರಾಸಾ 8 ರವರ ಸಹಿ |
| ನಿಪಿ-14ಬಿ | : ಪ್ರಾಸಾ 12 ರವರ ಸಹಿ |
| ನಿಪಿ-15 | : ಆರೋಪಿಯ ಗಾಯದ ಪ್ರಮಾಣಪತ್ರ |
| ನಿಪಿ-15ಎ | : ಪ್ರಾಸಾ 9 ರವರ ಸಹಿ |
| ನಿಪಿ-15ಬಿ | : ಪ್ರಾಸಾ 12 ರವರ ಸಹಿ |
| ನಿಪಿ-16 | : ಪ್ರಾಸಾ-2ರವರ ಗಾಯದ ಪ್ರಮಾಣಪತ್ರ |
| ನಿಪಿ-16ಎ | : ಪ್ರಾಸಾ 9 ರವರ ಸಹಿ |
| ನಿಪಿ-16ಬಿ | : ಪ್ರಾಸಾ 12 ರವರ ಸಹಿ |

| | |
|---|---|
| ನಿಪಿ-17 | : ಭಾ.ಸಾ.ಅ.ಕಲಂ.63(4)ರಡಿಯಲ್ಲಿ ದೃಡೀಕರಣ ಪತ್ರ |
| ನಿಪಿ-17ಎ | : ಪ್ರಾಸಾ 10 ರವರ ಸಹಿ |
| ನಿಪಿ-17ಬಿ | : ಪ್ರಾಸಾ 12 ರವರ ಸಹಿ |
| ನಿಪಿ-18 | : ಒಂದು ಸಿ.ಡಿ. |
| ನಿಪಿ-19 | : ಭಾ.ಸಾ.ಅ.ಕಲಂ.63(4)(ಸಿ)ರಡಿಯಲ್ಲಿ ದೃಡೀಕರಣ ಪತ್ರ |
| ನಿಪಿ-19ಎ | : ಪ್ರಾಸಾ 11 ರವರ ಸಹಿ |
| ನಿಪಿ-19ಬಿ | : ಪ್ರಾಸಾ 12 ರವರ ಸಹಿ |
| ನಿಪಿ-20 | : ಪ್ರಥಮ ವರ್ತಮಾನ ವರದಿ |
| ನಿಪಿ-20ಎ | : ಪ್ರಾಸಾ 13 ರವರ ಸಹಿ |

**ಅಭಿಯೋಜಕರ ಪರ ಗುರುತಿಸಿಕೊಂಡಿರುವ ಮುದ್ದೆ ಮಾಲುಗಳುಃ**

- ಇಲ್ಲ -

**ಆರೋಪಿತನ ಪರವಾಗಿ ಸಾಕ್ಷಿ ನುಡಿದವರುಃ**

- ಇಲ್ಲ -

**ಆರೋಪಿತನ ಪರವಾಗಿ ಗುರುತಿಸಿಕೊಂಡ ದಾಖಲೆಗಳುಃ**

- ಇಲ್ಲ -

Sd/-

( ಬಿ. ವೆಂಕಟಪ್ಪ )

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ, ಮಧುಗಿರಿ.